ದಿನಾಂಕಃ **25.04.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ KRS ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಸರ್ವೆ ನಂ.**13** ರಲ್ಲಿ ಮೊದಲು **8** ಎಕರೆ ಜಮೀನು ಇತ್ತು. ಈ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.**13** ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಜಮೀನನ್ನು ವಾದಿಯಿಂದ ಖರೀದಿ ಮಾಡಿರುತ್ತೇನೆ. ನಾನು ಸದರಿ ಜಮೀನು ಮಾರಾಟ ಮಾಡಿ **4-5** ವರ್ಷಗಳಾಗಿರುತ್ತದೆ. ನನ್ನ ಗಂಡ **8** ವರ್ಷಗಳ ಹಿಂದೆ ಖರೀದಿ ಮಾಡಿದ್ದರು. ನಾನು ಖೀರಿದಿ ಮಾಡಿದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಾವು ಖರೀದಿ ಮಾಡಿದಾಗ **8** ಹುಣಸೆ ಮರಗಳು ಇದ್ದವು. ಬೇರೆ ಮರಗಳು ಇರಲಿಲ್ಲ.

ಸರ್ವೆ ನಂ. **13** ರಲ್ಲಿ ಎಷ್ಟು ಪೋಡುಗಳು ಇವೆ ಎಂದು ನನಗೆ ಗೊತ್ತಿಲ್ಲ. ಯಾವ ಯಾವ ಪೋಡಿನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ವಾದಿ **1** ಎ ಈ ದಿನ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನನ್ನ ವಿರುದ್ಧ ಯಾವುದೇ ದಾವಾ ಇರುವುದಿಲ್ಲ. ಓ.ಎಸ್. **176/2016** ರಂತೆ ನನ್ನ ವಿರುದ್ಧ ಇದೇ ಸರ್ವೆ ನಂಬರ್ ಸಂಬಂದಪಟ್ಟಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆ ರಾಜಿಯಾಗಿರುತ್ತದೆ ಎಂದರೆ ಸರಿ. ಸದರಿ ದಾವೆ **4** ಎಕರೆ **28** ಗುಂಟೆಗೆ ಮಾತ್ರ ಸಂಬಂಧಿಸಿರುತ್ತದೆ ನಾನು ಹೇಳಿದಂತೆ **8** ಎಕರೆಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಾನು **8** ಎಕರೆ ಜಮೀನು ಖರೀದಿ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಸರ್ವೆ ನಂ.**13/1** ರಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಾನು ಮಾರಾಟ ಮಾಡಿದ ಕಾರಣ ಅವರೇ ಅದರ ಮಾಲೀಕರು ಎಂದರೆ ಯಾರು ಮಾರಾಟ ಮಾಡಿರುತ್ತಾರೆ

ಮತ್ತು ಯಾರು ಖರೀದಿ ಮಾಡಿರುತ್ತಾರೆ ಅವರಿಗೆ ಸಂಬಂಧಿಸಿದ್ದು ಎಂದು ಸಾಕ್ಷಿಯು ನುಡಿಯುತ್ತಾರೆ. ಆದ ಕಾರಣ ಮರಗಳ ಹಕ್ಕು ಸಹ ಪ್ರತಿವಾದಿಗಳಿಗೆ ಇರುತ್ತದೆ ಎಂದರೆ ನಾವೆನೂ ಬರೆದುಕೊಟ್ಟಿಲ್ಲ, ಆದ ಕಾರಣ ಅವರಿಗೂ ಹಕ್ಕು ಇರುವುದಿಲ್ಲ. ಕ್ರಯ ಪತ್ರದಲ್ಲಿ ನಾನು ಮಾರಾಟ ಮಾಡುತ್ತಿರುವ ಜಮೀನಿನಲ್ಲಿ ಇರುವ ಎಲ್ಲಾ ಮರ ನಿಧಿ, ನಿಕ್ಷೇಪ, ಜಲ, ತರು ಎಲ್ಲವನ್ನು ಸೇರಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಹಾಗೆ ಬರೆದುಕೊಟ್ಟಿದ್ದರು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮರಗಳನ್ನು ಬರೆದುಕೊಟ್ಟಿಲ್ಲ ಎಂದು ದೂರು ನೀಡಿರುತ್ತೇನೆ. ದಿ.**20.10.2015** ರಂದು ಗೌರಮ್ಮ ಮತ್ತು ನಾಗವೇಣಿಗೆ ನಾನು ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಾನು ಸದರಿ ಕ್ರಯ ಪತ್ರದಲ್ಲಿರುವ ವಿಚಾರಗಳನ್ನು ತಿಳಿದು ಮಾರಾಟ ಮಾಡಿರುತ್ತೇನೆ ಎಂದರೆ ಸರ್. ಗೌರಮ್ಮ ಮತ್ತು ನಾಗವೇಣಿ ರವರು ಪ್ರತಿವಾದಿಗಳಿಗೆ ಐ,**11.04.2016** ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಂತೆ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನನಗೆ ಈ ದಾವೆ ಬಗ್ಗೆ ಏನೂ ತಿಳಿಯದ ಇದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ